# ಮಹಿಳಾ ಉದ್ದೇಶಿತ ಆಯವ್ಯಯ

ಮಹಿಳಾ ಉದ್ದೇಶಿತ ಆಯವ್ಯಯದಲ್ಲಿ ಮಹಿಳೆಯರಿಗಾಗಿ ನೀಡಿರುವ ಹಂಚಿಕೆಯನ್ನು ನಿಖರವಾಗಿ ಗುರುತಿಸಿ, ಜನಪರ ರೀತಿಯಲ್ಲಿ, ಸ್ಪಷ್ಟವಾಗಿ ಪ್ರಚುರಪಡಿಸುವಂತೆ ಮಂಡಿಸುವುದಾಗಿದೆ. ರಾಜ್ಯವು ಮಹಿಳಾ ಉದ್ದೇಶಿತ ಆಯವ್ಯಯವನ್ನು 2007–08ನೇ ಸಾಲಿನಿಂದಲೂ ಪ್ರಕಟಿಸುತ್ತಾ ಬಂದಿದೆ. ಆಯವ್ಯಯದ ವಿಂಗಡಣೆಯನ್ನು ಸ್ಪಷ್ಟವಾಗಿಸುವುದು ನಿರಂತರ ಪ್ರಕ್ರಿಯೆಯಾಗಿರುತ್ತದೆ. ಈ ಹಂಚಿಕೆ ಪತ್ರವು (ಅ) ಚಾಲ್ತಿಯಲ್ಲಿರುವ ಮಹಿಳಾ ಉದ್ದೇಶಿತ ಕಾರ್ಯಕ್ರಮಗಳ ಕುರಿತು ನಿಖರವಾದ ಗಮನ (ಆ) ಮಹಿಳೆಯರ ಸೌಕರ್ಯಕ್ಕಾಗಿ ಇರುವ ಕಾರ್ಯಕ್ರಮಗಳಲ್ಲಿ ಹೊಸ ಚಟುವಟಿಕೆಗಳನ್ನು ಅಳವಡಿಸುವುದು ಹಾಗೂ (ಇ) ಮಹಿಳಾ ಉದ್ದೇಶಿತ ಆಯವ್ಯಯದಲ್ಲಿ ಹೊಸ ಕಾರ್ಯಕ್ರಮಗಳನ್ನು ಸೇರಿಸುವುದನ್ನು ಒಳಗೊಂಡಿದೆ. ಈ ಕಾರಣದಿಂದಾಗಿ ಗುರುತಿಸಿರುವ ಕಾರ್ಯಕ್ರಮಗಳ ಸಂಖ್ಯೆಯು ಹೆಚ್ಚಾಗಿದ್ದು 2007–08ನೇ ಸಾಲಿನಲ್ಲಿ 136 ಕಾರ್ಯಕ್ರಮಗಳನ್ನು ಗುರುತಿಸಲಾಗಿದ್ದು, 2008–09ನೇ ಸಾಲಿನಲ್ಲಿ 703 ಹಾಗೂ 2009–2010ನೇ ಸಾಲಿನಲ್ಲಿ 789 ಕಾರ್ಯಕ್ರಮಗಳನ್ನು ಗುರುತಿಸಲಾಗಿದೆ. ಈ ಸಾಲಿನ ಆಯವ್ಯಯ ಪತ್ರದಲ್ಲಿ 2007–08, 2008–09 ಮತ್ತು 2009–2010ನೇ ಸಾಲುಗಳಿಗೆ ಇಲಾಖಾವಾರು ಕಾರ್ಯಕ್ರಮಗಳ ಸಂಖ್ಯೆಯನ್ನು ಗುರುತಿಸಿರುವ ಹೊಸ ಕೋಷ್ಠಕವನ್ನು ಅನುಬಂಧ – 1 ರಲ್ಲಿ ನೀಡಲಾಗಿದೆ.

ಮುಂದುವರೆದು, ಕಾರ್ಯಕ್ರಮಗಳ ಅನುಷ್ಠಾನದ ವೇಳೆ ಎಂಐಎಸ್ (ನಿರ್ವಹಣಾ ಮಾಹಿತಿ ವ್ಯವಸ್ಥೆ) / ಎಂಪಿಐಸಿ (ಮಾಸಿಕ ಕಾರ್ಯಕ್ರಮ ಅನುಷ್ಠಾನ ವೇಳಾಪಟ್ಟಿ) ಮೂಲಕ ಉತ್ಪಾದಿಸಿರುವ ಲಿಂಗ ಆಧಾರಿತವಾಗಿ ವಿಘಟಿತ ಮಾಹಿತಿಯು ಮಹಿಳಾ ಉದ್ದೇಶಿತ ಆಯವ್ಯಯವನ್ನು ಆಳವಾಗಿ ವಿಶ್ಲೇಷಿಸುವಲ್ಲಿ ನೆರವು ನೀಡುತ್ತದೆ. ಲಿಂಗ ಆಧಾರಿತ ವಿಘಟಿತ ಮಾಹಿತಿಯು ಅಗತ್ಯಗಳನ್ವಯ ನೀತಿ ನಿರೂಪಣೆಗೆ ನೆರವು ನೀಡುವುದರೊಂದಿಗೆ ಅಭಿವೃದ್ಧಿಶೀಲ ರಾಜ್ಯವಾದ ಕರ್ನಾಟಕದ ಮಹಿಳೆಯರ ಹೆಚ್ಚುತ್ತಿರುವ ಬೇಡಿಕೆಗಳನ್ನು ಪೂರೈಸುವಲ್ಲಿ ಅದರಲ್ಲೂ ಅಸಹಾಯ ಮಹಿಳೆಯರ ಬೇಡಿಕೆಗಳನ್ನು ಪೂರೈಸುವಲ್ಲಿ ಮತ್ತು ವೆಚ್ಚಗಳನ್ನು ಪ್ರಾಶಸ್ತ್ಯಕ್ಕೆ ಅನುಗುಣವಾಗಿ ಆಯ್ಕೆ ಮಾಡಲು ಹಾಗೂ ಸಮರ್ಪಕವಾಗಿ ನಿರ್ವಹಿಸಲು ನೆರವು ನೀಡುತ್ತದೆ. ಈ ರೀತಿಯ ಮಾಹಿತಿ ಸಂಗ್ರಹಣೆಯು ಸಾಮಾನ್ಯ ಸೇವೆಗಳು, ಸಾಮಾಜಿಕ ಹಾಗೂ ಸಾಮುದಾಯಿಕ ಸೇವೆಗಳು ಮತ್ತು ಆರ್ಥಿಕ ಸೇವೆಗಳಿಗೆ ಸಂಬಂಧಿಸಿದಂತೆ ಮಾಡಿರುವ ಹಂಚಿಕೆಗಳನ್ನು ಅರ್ಥೈಸಲು ನೆರವು ನೀಡುವುದರೊಂದಿಗೆ ಅವುಗಳ ಪರಿಣಾಮವನ್ನು ಸಹ ತಿಳಿಯಲು ನೆರವು ನೀಡುತ್ತದೆ.

ಈ ಆಯವ್ಯಯ ಪತ್ರವು ಮಹಿಳಾ ಉದ್ದೇಶಿತ ಆಯವ್ಯಯವನ್ನು 26 ಬೇಡಿಕೆಗಳಡಿಯಲ್ಲಿ ಪ್ರಚುರಪಡಿಸುತ್ತದೆ. ಇದು ಆಯವ್ಯಯವನ್ನು ಎರಡು ವರ್ಗಗಳಾಗಿ ಮಂಡಿಸುತ್ತದೆ; ಶೇಕಡಾ ನೂರಕ್ಕೆ ನೂರರಷ್ಟು ಮಹಿಳೆಯರ ಸೌಕರ್ಯಕ್ಕಾಗಿಯೇ ಇರುವ ಯೋಜನೆಗಳನ್ನು ವರ್ಗ 'ಎ' ಎಂದು ವರ್ಗೀಕರಿಸಲಾಗಿದೆ ಮತ್ತು ಆಯವ್ಯಯದ ಕನಿಷ್ಠ ಶೇಕಡಾ 30 ರಷ್ಟಾದರೂ ಸೌಕರ್ಯ ಮಹಿಳೆಯರಿಗಾಗಿ ಸಂದಾಯವಾದಲ್ಲಿ ವರ್ಗ 'ಬಿ'ಗೆ ಸೇರಿಸಲ್ಪಡುತ್ತದೆ. ಈ ಕಾರಣ, ಸಾಮಾಜಿಕ ಮತ್ತು ಆರ್ಥಿಕ ವಲಯಗಳ ಯೋಜನಾ ಹಂಚಿಕೆಯ ಶೇಕಡಾ 30ರಷ್ಟು ಮೌಲ್ಯವನ್ನು ಕ್ರೋಢೀಕರಣಕ್ಕೆ ಪರಿಗಣಿಸಿದೆ. ಆಯವ್ಯಯ ಬೇಡಿಕೆಗಳ ವ್ಯಾಪ್ತಿಯಲ್ಲಿ ಬರುವ 39 ಇಲಾಖೆಗಳು ಈ ರೀತಿ ಇವೆ – ಕೃಷಿ, ಪಶು ಸಂಗೋಪನೆ ಮತ್ತು ಪಶುವೈದ್ಯಕೀಯ ವಿಜ್ಞಾನ, ಹಿಂದುಳಿದ ವರ್ಗಗಳ ಅಭಿವೃದ್ಧಿ, ವಾಣಿಜ್ಯ ಮತ್ತು ಕೈಗಾರಿಕೆ, ಸಹಕಾರ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ, ಶಿಕ್ಷಣ, ಉದ್ಯೋಗ ಮತ್ತು ತರಬೇತಿ, ಆರ್ಥಿಕ, ಮೀನುಗಾರಿಕೆ, ಆಹಾರ ಮತ್ತು ನಾಗರೀಕ ಸರಬರಾಜು, ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ, ಜವಳಿ ಮತ್ತು ಕೈಮಗ್ಗ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಗೃಹಾಡಳಿತ, ತೋಟಗಾರಿಕೆ, ವಸತಿ, ವಾರ್ತಾ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ, ಕಾರ್ಮಿಕ, ಕಾನೂನು, ಅಲ್ಪ ಸಂಖ್ಯಾತರ ಅಭಿವೃದ್ಧಿ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ಅಂಗವಿಕಲ ಮತ್ತು ಹಿರಿಯ ನಾಗರೀಕರು, ಯೋಜನೆ ಮತ್ತು ಸಾಂಖ್ಯಿಕ, ಕಂದಾಯ, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್, ಪರಿಶಿಷ್ಟ

ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ, ವಿಜ್ಞಾನ ಮತ್ತು ತಂತ್ರಜ್ಞಾನ, ರೇಷ್ಮೆ, ಸಮಾಜ ಕಲ್ಯಾಣ, ಪ್ರವಾಸೋದ್ಯಮ, ಪೌರಾಡಳಿತ, ಸಾರಿಗೆ, ನಗರಾಭಿವೃದ್ಧಿ, ಜಲಾನಯನ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಹಾಗೂ ಯುವಜನ ಸೇವೆ.

2009–10ನೇ ಸಾಲಿಗೆ ಆಯವ್ಯಯದ ವರ್ಗ 'ಎ' ಕಾರ್ಯಕ್ರಮಗಳ ಯೋಜನಾ ಹಂಚಿಕೆ 84114.95 ಲಕ್ಷ ರೂಪಾಯಿಗಳು ಹಾಗೂ ಯೋಜನೇತರ ಹಂಚಿಕೆ 394.63 ಲಕ್ಷ ರೂಪಾಯಿಗಳು. ವರ್ಗ 'ಬಿ' ಕಾರ್ಯಕ್ರಮಗಳ ಯೋಜನಾ ಹಂಚಿಕೆ 1032060.38 ಲಕ್ಷ ರೂಪಾಯಿಗಳು ಹಾಗೂ ಯೋಜನೇತರ ಹಂಚಿಕೆ 1196470.89 ಲಕ್ಷ ರೂಪಾಯಿಗಳು.

ಎರಡೂ ವರ್ಗಗಳಿಗೆ ಒಟ್ಟು ಹಂಚಿಗೆಗಳ ಕೋಷ್ಟಕ ಮುಂದಿನಂತಿದೆ. (ಲಕ್ಷ ರೂಗಳಲ್ಲಿ)

| | 2007–08 ಲೆಕ್ಕ | | 2008–09 ಬಜೆಟ್ | | 2008–09 ಪರಿಷ್ಕೃತ | | 2009–10 ಬಜೆಟ್ | |
|---|---|---|---|---|---|---|---|---|
| | ಯೋಜನೆ | ಯೋಜನೇತರ | ಯೋಜನೆ | ಯೋಜನೇತರ | ಯೋಜನೆ | ಯೋಜನೇತರ | ಯೋಜನೆ | ಯೋಜನೇತರ |
| ವರ್ಗ 'ಎ' | 55017 | 149 | 65912 | 265 | 51137 | 265 | 84115 | 395 |
| ವರ್ಗ 'ಬಿ' | 642019 | 986017 | 942567 | 1133915 | 806485 | 1137641 | 1032060 | 1196471 |
| ಒಟ್ಟು | 697036 | 986165 | 1008479 | 1134180 | 857621 | 1137906 | 1116175 | 1196866 |
| ಒಟ್ಟು ಸಂಚಿತ ನಿಧಿ | 1626304 | 3184618 | 2398104 | 3651615 | 1817831 | 3416708 | 2451596 | 3789785 |

2009–10ರಲ್ಲಿ, ಮಹಿಳಾ ಉದ್ದೇಶಿತ ಆಯವ್ಯಯದ ಯೋಜನಾ ವೆಚ್ಚವು ಸಂಚಿತ ನಿಧಿಯ ಶೇಕಡಾ 45.53ರಷ್ಟಿದ್ದು, ಯೋಜನೇತರ ವೆಚ್ಚವು ಇದರ ಶೇಕಡಾ 31.58ರಷ್ಟಿರುತ್ತದೆ. ಮಹಿಳಾ ಉದ್ದೇಶಿತ ಆಯವ್ಯಯವು ಸಂಚಿತ ನಿಧಿಯ ಒಟ್ಟು ವೆಚ್ಚಕ್ಕೆ ಶೇಕಡ 37.06ರಷ್ಟಿದೆ. ಮಹಿಳೆಯರ ಒಟ್ಟಾರೆ ಸಾಮಾಜಿಕ ಹಾಗೂ ಆರ್ಥಿಕ ಸ್ತರಗಳ ಮೇಲೆ ಈ ಆಯವ್ಯಯದ ಪರಿಣಾಮವನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮೂಲಕ ಮೇಲುಸ್ತುವಾರಿ ಮಾಡುವುದರಿಂದ ತಿಳಿಯಬಹುದಾಗಿದೆ.